ಓ. ಎಸ್. ನಂ: 113/2016

ಡಿ . ಡಬ್ಲ್ಯೂ: 4

ದಿ:02-06-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು: ಶ್ರೀ ಕೆ ಸಿ ಪಿ ವಾದಿ ಪರ ವಕೀಲರಿಂದ ::

ನಾನು ಬಂಕಾಪುರದ ನಾರಾಯಣಪುರದಲ್ಲಿ ಮದುವೆ ನಂತರದಿಂದ ವಾಸವಿರುತ್ತೇನೆ. ನನಗೆ 56 ವರ್ಷ ವಯಸ್ಸು. ದ್ಯಾಮವ್ವ ಅವರಿಗೆ 5 ಜನ ಮಕ್ಕಳು, ಬಸವಂತಪ್ಪ ಅವರು ನನಗಿಂತ 6 ವರ್ಷ ದೊಡ್ಡವರು. ನನ್ನ ತಾಯಿಯ ಮದುವೆ ನಂತರ ಎಷ್ಟು ವರ್ಷಕ್ಕೆ ಬಸವಂತಪ್ಪ ಜನಿಸಿದರು ಎಂದರೆ ನನಗೆ ಗೊತ್ತಿಲ್ಲ. ನನ್ನ ತಾಯಿಯ ಮದುವೆ ಸುಮಾರು 1960 ರಲ್ಲಿ ಆಗಿದೆ ಎಂದರೆ ಸರಿ. ಟೆನೆನ್ಸಿ ಕಾಯದೆ ಮುಖಾಂತರ ನನ್ನ ಅಜ್ಜನಿಗೆ/ನಿಂಗನಗೌಡ ಅವರು ಫಾರ್ಮ ನಂಬರ 7 ತುಂಬುವ ಕಾಲಕ್ಕೆ ನನ್ನ ತಾಯಿ ಮದುವೆ ಆದ ಮಗಳು ಎಂದು ನಮೂದು ಇತ್ತು ಎಂದರೆ ಸರಿ.ಈ ದಾವೆಯಲ್ಲಿ ಎಷ್ಟು ಆಸ್ತಿಗಳನ್ನು ಸೇರಿಸಿದ್ದಾರೆ ಎಂದು ಗೊತ್ತಿಲ್ಲ. ದಾವಾ ಆಸ್ತಿಯ ಹೊಲ ಮನೆ ಇರುತ್ತದೆ. ನನ್ನ ತಾಯಿಯ ತಂದೆಗೆ ದಾವಾ ಆಸ್ತಿ ಹೇಗೆ ಬಂತು ಎಂದು ಗೊತ್ತಿಲ್ಲ. ಶರಣಪ್ಪ ಯಾವ ಆಸ್ತಿಯ ಕುರಿತು ದಾವೆ ಮಾಡಿದ್ದಾನೆ ಎಂದರೆ ಗೊತ್ತಿಲ್ಲ. ದಾವಾ ಆಸ್ತಿಗಳನ್ನು ನೊಡಿದ್ದೇನೆ ಎಷ್ಟು ಕ್ಷೇತ್ರ ಇದೆ ಎಂದು ಗೊತ್ತಿಲ್ಲ. ದಾವಾ ಆಸ್ತಿಗಳು ಉತಾರ ಒದಿಸಿ ತಿಳಿದುಕೊಂಡಿಲ್ಲ. ರಿ ಸನಂಬರ 9 ಹೊರತುಪಡಿಸಿ ಉಳಿದ ದಾವಾ ಆಸ್ತಿಗಳು ದೇಶಪಾಂಡೆ ಅವರ ಆಸ್ತಿ ಎಂದರೆ ಗೊತ್ತಿಲ್ಲ. ರಿ ಸನಂಬರ 73 1 ಎಕರೆ 10 ಗುಂಟೆ ಹೆಗೆ ಬಂತು ಎಂದು ದಾಖಲೆಗಳನ್ನು ನೋಡಿಲ್ಲ.ಈ ದಾವೆ ಆಸ್ತಿಗಳ ಸಂಪೂರ್ಣ ಮಾಹಿತಿ ಶರಣಪ್ಪ/ವಾದಿ ಅವರಿಗೆ ಇರುತ್ತದೆ. ವಾದಿಯು ರಿಸನಂಬರ 73 ಹೊರತುಪಡಿಸಿ ದಾವೆ ಮಾಡಿದ್ದಾರೆ ಎಂದರೆ ಗೊತ್ತಿಲ್ಲ. ರಿ ಸನಂಬರ 9 ಎಷ್ಟು ಕ್ಷೇತ್ರ ಇದೆ ಎಂದು ನನಗೆ ಗೊತ್ತಿಲ್ಲ. ರಿ ಸನಂಬರ 9 ಕುರಿತಾಗಿ ನನ್ನ ತಾಯಿ ಅಥವಾ ನಾನು ಫಾರ್ಮ ನಂಬರ 7 ತುಂಬಿಲ್ಲ . ತಕರಾರು ಎನು ನೀಡಿದ್ದಾರೆ ಎಂದರೆ ಸಾಕ್ಷಿಯು ದ್ಯಾಮವ್ವನ ಹಿಸ್ಸೆ ಬೇಕು ಎಂದು ನೀಡಿದ್ದಾರೆ ಎಂದರು. ಸದರಿ ತಕರಾರಿಗೆ ನಾನು ಸಹಿ ಮಾಡಿಲ್ಲ. ರಿಸನಂಬರ 9 ಒಂದೇ ದೊಡ್ಡ ಹೊಲ ಎಂದರೆ ಎಷ್ಟು ಕ್ಷೇತ್ರ ಇದೆ ಎಂದು ಗೊತ್ತಿಲ್ಲ. ದಾವಾ ಆಸ್ತಿಗಳನ್ನು ನಾನು ಸ್ವಂತಕ್ಕೆ ಉಳುಮೆ ಮಾಡಿಲ್ಲ ಎಂದರೆ ಸರಿ .ರಿಸ ನಂಬರ 9ಕ್ಕೆ ಫಾರ್ಮ ನಂಬರ 7ನ್ನು ರಾಮನಗೌಡ ಮಾತ್ರ ತುಂಬಿಕೊಟ್ಟಿದ್ದಾರೆ ಎಂದರೆ ಗೊತ್ತಿಲ್ಲ. ಹನುಮಂತಗೌಡ , ಶಿವನಗೌಡ , ಎಲ್ಲನಗೌಡ ಅವರು ರೈತಾಪಿ ಹಕ್ಕನ್ನು ಕೇಳಿ

ಪಾರ್ಮ ನಂಬರ 7 ತುಂಬಿದ್ದು ಗೊತ್ತಿಲ್ಲ. 1991 ರಲ್ಲಿ ಎಲ್ಲರೂ ಡ ನಂಬರ 357 ಪ್ರಕಾರ ರಾಮನಗೌಡ ಅವರ ಹೆಸರು ಮಾತ್ರ ನಮೂದು ಆಗುತ್ತದೆ ಅಂದಿನಿಂದ ಅವರೇ ಕಬ್ಜೆಯಲ್ಲಿ ಇದ್ದಾರೆ ಅವರೇ ಕಬ್ಜೆಯಲ್ಲಿ ಇದ್ದಕಾರಣ ಅವರಿಗೆ ಬಿಟ್ಟು ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಡನಂಬರ 357 ರ ಕುರಿತಾಗಿ ನನ್ನ ತಾಯಿ ಜೀವಂತ ಇದ್ದಾಗ ಅಪೀಲು ಮಾಡಿದ ಬಗ್ಗೆ ನನಗೆ ಗೊತ್ತಿಲ್ಲ. ಡನಂಬರ 357 ಪ್ರಶ್ನಿಸಿ ನಾನು ಅಪೀಲು ಮಾಡಿಲ್ಲ . ಸದರಿ ಜಮೀನು ರಾಮನಗೌಡ ಅವರ ಕಬ್ಜೆಯಲ್ಲಿ ಇದ್ದ ಬಗ್ಗೆ , ಪಾರ್ಮ ನಂಬರ ಅವರೇ ತುಂಬಿದ್ದರ ಬಗ್ಗೆ ನನಗೆ ಗೊತ್ತಿಲ್ಲ. ಈ ದಾವೆಯಲ್ಲಿ ರಿ ಸನಂಬರ 73 ಸೇರಿಸಿ ರಿ ಸನಂಬರ 9 ಬಿಟ್ಟು ಹಿಸ್ಸೆ ಮಾಡಲು ನನ್ನ ತಕರಾರು ಇದೆಯಾ ಎಂದರೆ ಸಾಕ್ಷಿಯು ಎಲ್ಲರಿಗೂ ಹೇಗೆ ಹಿಸ್ಸೆ ಬರುತ್ತದೋ ಹಾಗೇ ಬರಬೇಕು ಎಂದರು. ನನ್ನ ತಾಯಿಯ ಮದುವೆ ಈ ಆಸ್ತಿಯು ಟೆನೆನ್ಸಿ ಕಾಯದೇ ಮಂಜೂರಾಗುವ ಪೂರ್ವದಲ್ಲಿ ಆಗಿದ್ದರಿಂದ ಅವರಿಗೆ ಆಸ್ತಿಯಲ್ಲಿ ಪಾಲು ಬರುವುದಿಲ್ಲ ಎಂದರೆ ಸರಿಯಲ್ಲ. ಮನೆ ಹಿರಿಯರಿಂದ ಬಂದಿದೆ ಎಂದರೆ ಸರಿ . ನಾನು ವಾದಿಯ ಜೊತೆ ಮೊದಲಿನಿಂದ ಇಲ್ಲಿಯವರೆಗೆ ಮಾತನಾಡುತ್ತಿದ್ದೇನೆ. ವಾದಿ ಆರ ಎಸ್ ನಂ. 73 ನ್ನು ಈ ದಾವೆಯಲ್ಲಿ ಸೇರಿಸಿದ ಕಾರಣ ಮಾಗಣಿ ಮಾಡಲು ಬರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ರಿ ಸನಂಬರ 9 ನ್ನು ತಪ್ಪಾಗಿ ದಾವೆಯಲ್ಲಿ ಸೇರ್ಪಡೆ ಮಾಡಿದ್ದು ನನಗೆ ಗೊತ್ತಿದೆ ಎಂದರೆ ಸರಿಯಲ್ಲ . ರಿ ಸನಂಬರ 9 ನ್ನು ತಪ್ಪಾಗಿ ದಾವೆಯಲ್ಲಿ ಸೇರ್ಪಡೆ ಮಾಡಿದ್ದು ಆರ ಎಸ್ ನಂ. 73 ನ್ನು ಈ ದಾವೆಯಲ್ಲಿ ಸೇರಿಸಿದೇ ಇರುವುದು ನನಗೆ ಗೊತ್ತಿದ್ದರೂ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪಾರ್ಮ ನಂಬರ 7 ಎ ಮತ್ತು ರಿ ಸನಂಬರ 9 ರ ಕುರಿತು ರಾಮನಗೌಡ ಕೇಸ ನಡೆಸುತ್ತಿರುವುದು ಗೊತ್ತಿದೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ ನನ್ನ ತಾಯಿಗೆ ಯಾವುದೇ ಹಿಸ್ಸೆ ಬರುವುದಿಲ್ಲ ಎಂದರೂ ಕೂಡ ವಾದಿಯ ಮಾತು ಕೇಳಿ ಸುಳ್ಳು ತಕರಾರು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು.)

ಓ ಹೆ ಕೆ ಸರಿ ಅದೆ.

ಸಿವಿಲ್ ನ್ಯಾಯಾಧೀಶರು, ಶಿಗ್ಗಾಂವ.

ಓ. ಎಸ್. ನಂಃ 113/2016

ಡಿ . ಡಬ್ಲ್ಯೂಃ 3

ದಿಃ02-06-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಶ್ರೀ ಕೆ ಸಿ ಪಿ ವಾದಿ ಪರ ವಕೀಲರಿಂದ ಃ

ನಾನು ಈ ದಾವೆಯಲ್ಲಿ ಸ್ವತಂತ್ರ ತಕರಾರು ಕೊಟ್ಟಿರುವುದಿಲ್ಲ 9 ನೇ ಪ್ರತಿವಾದಿಯವರ ತಕರಾರನ್ನು ಅಳವಡಿಸಿಕೊಂಡಿದ್ದೇನೆ ಎಂದರೆ ಸಾಕ್ಷಿಯು ತಕರಾರು ಹಾಕಿರುತ್ತೇನೆ. ನಾನು ತಕರಾರು ನೀಡಿಲ್ಲ ಎಂದರೆ ಸರಿಯಲ್ಲ.ಕಡಹಳ್ಳಿ ಗ್ರಾಮದ ರಿಸನಂಬರ 43/3 9 ಗುಂಟೆ ಜಾಗದಲ್ಲಿ ಹೊಲ ಇದೆ ಎಂದರೆ ಸರಿ. ಅದರ ಕ್ಷೇತ್ರ ನನಗೆ ಗೊತ್ತಿಲ್ಲ. ಈ ದಾವೆಯ ಆಸ್ತಿಗಳ ಎಲ್ಲದರ ಕ್ಷೇತ್ರ ನನಗೆ ಗೊತ್ತಿಲ್ಲ . .ಕಡಹಳ್ಳಿ ಗ್ರಾಮದ ರಿಸನಂಬರ 43/3 ಚನ್ನಬಸಯ್ಯ ಚನ್ನವೀರಯ್ಯ ಅವರ ಮನೆ ಇದೆ ಎಂದರೆ ಇರಬಹುದು . 1968 ರಿಂದ ಚನ್ನಬಸಯ್ಯ ಚನ್ನವೀರಯ್ಯ ಕಬ್ಜೆಯಲ್ಲಿ ಇದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಈ ದಾವೆಯ ವಾದಿ ದೊಡ್ಡ ಮಗ. ನನ್ನ ಮದುವೆ ಆದ ಕಾಲದಿಂದ ಚನ್ನಬಸಯ್ಯ ಅವರು ರಿ ಸನಂಬರ 43/3 ಕಬ್ಜೆಯಲ್ಲಿ ಇದ್ದಾರೆ ಎಂದರೆ ಗೊತ್ತಿಲ್ಲ. ರಿ ಸ ನಂಬರ 43/3 ಹೊಲ ಆಗಿ ಉಳಿದಿಲ್ಲ ಅದು ಪ್ಲಾಟ ಇದೆ ಎಂದರೆ ಸಾಕ್ಷಿಯು ಅದನ್ನು ನಾವೇ ಸಾಗು ಮಾಡುತ್ತೇವೆ ಅದು 1 ಎಕರೆ ಕ್ಷೇತ್ರ ಇದೆ . ರಿ ಸನಂಬರ 43/3 ಕ್ಷೇತ್ರ 1 ಎಕರೆ ಆಸ್ತಿ ಇಲ್ಲ ಎಂದರೆ ಸರಿ. ರಿ ಸ ನಂಬರ 9 8 ಎಕರೆ 21 ಗುಂಟೆ ಇದರ ಕುರಿತು ಫಾರ್ಮ ನಂಬರ 7 ಭರಿಸಿರುತ್ತೇವೆ ಸದರಿ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಫಾರ್ಮ ನಂಬರ 7 ಭರಿಸಿರುವುದಿಲ್ಲ ಎಂದರೆ ಸರಿಯಲ್ಲ. ಫಾರ್ಮ ನಂಬರ 7 (ಎ) ಯನ್ನು ತುಂಬಿದ್ದೇನೆ . ಅದರ ಕುರಿತಾಗಿ ದಾಖಲೆಗಳನ್ನು ಹಾಜರುಪಡಿಸಿದೀಯಾ ಎಂದರೆ ಸಾಕ್ಷಿಯು ವಾದಿಯನ್ನು ಕೇಳಬೇಕು. ರಿ ಸ ನಂಬರ 9 ಕ್ಕೆ ರಾಮನಗೌಡ ಲಿಂಗನಗೌಡ ಹೊನ್ನಪ್ಪನವರ ಅವರನ್ನು ಹೊರತುಪಡಿಸಿ ಲಿಂಗನಗೌಡ ರಾಮನಗೌಡ ಹೊನ್ನಪ್ಪನವರ ಉರ್ಫ ಹೊನ್ನಪ್ಪಗೌಡ ಅವರ ವಾರಸುದಾರರು ಯಾರೂ ಫಾರ್ಮ ನಂಬರ 7 ಮತ್ತು 7(ಎ) ತುಂಬಿಲ್ಲ ಎಂದರೆ ಸರಿ. ರಾಮನಗೌಡ ರಿ ಸ ನಂಬರ 9 ಕುರಿತಾಗಿ ಫಾರ್ಮ ನಂಬರ 7 ತುಂಬಿದ್ದು ಆ ಕೇಸ ಇನ್ನು ಚಾಲ್ತಿಯಲ್ಲಿ ಇದೆ ಎಂದರೆ ಗೊತ್ತಿಲ್ಲ. ಸದರಿ ವಿಷಯ ನನಗೆ ಗೊತ್ತಿದ್ದರೂ ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ

ಸರಿಯಲ್ಲ. ಶರಣಪ್ಪ ಅವರು ನನಗಾಗಲೀ ಶಿವನಗೌಡ ಎಲ್ಲನಗೌಡ ದರ್ಮಗೌಡ ಅವರಿಗೆ ಹಿಸ್ಸೆ ಮಾಡಿ ಕೊಡಿ ಎಂದು ಕೇಳಿರುತ್ತಾರೆ ಯಾವಾಗ ಕೇಳಿದ್ದಾರೆ ಎಂದು ನನಗೆ ನೆನಪಿಲ್ಲ. ನಾನು ಹಿಸ್ಸೆ ನ್ಯಾಯಾಲಯದಿಂದ ಪಡೆದುಕೊಳ್ಳಿ ಎಂದು ಹೇಳಿದೆ. ಹಿಸ್ಸೆ ಕೇಳಿದಾಗ ಯಾರು ಯಾರು ಇದ್ದರು ಎಂದರೆ ಹನುಮಂತಗೌಡ , ಶಿವನಗೌಡ , ಎಲ್ಲನಗೌಡ, ದ್ಯಾಮನಗೌಡ 4 ಜನರ ಕುಟುಂಬದವರು ಸೇರಿ ದಾವೆ ಮಾಡಿರುತ್ತೇವೆ . ಎಲ್ಲರೂ ಕೂಡಿ ದಾವೆ ಮಾಡಿಲ್ಲ ಶರಣಪ್ಪ ಒಬ್ಬನೇ ಮಾತ್ರ ಉದ್ದೇಶಪೂರ್ವಕವಾಗಿ ತನ್ನನ್ನು ಹೊರತುಪಡಿಸಿ ನಿಮ್ಮನ್ನು ಪ್ರತಿವಾದಿ ಮಾಡಿ ತನಗೆ ಅನುಕೂಲವಾಗುವ ರೀತಿ ದಾವೆಯಲ್ಲಿ ಉತ್ತರ ಪಡೆಯಲು ದಾವೆ ಮಾಡಿದ್ದಾರೆ ಎಂದರೆ ಸರಿಯಲ್ಲ. ರಿ ಸ ನಂಬರ 73 ಶಿವನಗೌಡ ಅವರಿಗೆ ಮುಂಜುರು ಆದ ಬಗ್ಗ ದಾಖಲಾತಿಗಳನ್ನು ನೊಡಿಲ್ಲ. ಮೊದಲಿಗೆ ರಿ ಸನಂಬರ 73 ನನ್ನ ಮಾವನವರಿಗೆ ಮಂಜೂರಾದ ಕಾರಣ ಕಾಯದೆ ಅಡಿ ಮರು ಮಂಜುರಾತಿ ಮಾಡಲು ಬರುವುದಿಲ್ಲ ಎಂದರೆ ಗೊತ್ತಿಲ್ಲ. ಈ ದಾವೆಯಲ್ಲಿ ಶರಣಪ್ಪ ಹೇಳಿದಾಗೆ ತಕರಾರು ಕೊಟ್ಟು ಅವರು ಹೇಳಿದ ಹಾಗೆ ಸಾಕ್ಷಿ ನುಡಿಯುತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು.)

ಓ ಹೆ ಕೆ ಸರಿ ಅದೆ.

ಸಿವಿಲ್ ನ್ಯಾಯಾಧೀಶರು, ಶಿಗ್ಗಾಂವ.